ಡೆಪ್ಯೂಟಿ ರಿಜಿಸ್ಟ್ರಾರ್ ರವರು ಅವರು ಡಿಸ್‌ಕ್ವಾಲಿಫೈ ಆಗಬೇಕೆಂದು ಆದೇಶಿಸಿದ್ದಾರೆ. ಆದರೂ ಇನ್ನೂ ನಿಖಾಲೆಯಾಗಲಿಲ್ಲ. ಹೀಗಾಗಿ ಈ ಕೂಡಲೇ ನಿಖಾಲೆ ಮಾಡುವಂಥ ವ್ಯವಸ್ಥೆ ಯಾಗಬೇಕು. .. ಇದು ಅದೇ ಬ್ಯಾಂಕಿನ ವಿಷಯ. ಆರ್ಡರ್ ಪ್ರಕಾರ ಅವರು ಡಿಸ್‌ಕ್ವಾಲಿಫೈ ಆಗಬೇಕಾಗುತ್ತದೆ. ಮೊದಲು ಆ ಕೆಲಸ ಮಾಡಬೇಕೆಂದು ವಿನಂತಿಸುತ್ತೇನೆ. ಮಾನ್ಯ ಸಹಕಾರ ಸಚಿವರು ಹೇಳಿದ ತನಿಖೆಗೆ ಮೂರು ತಿಂಗಳು ಹೋಗಿದೆ. 64 (1) ರಡಿಯಲ್ಲಿ ಇವರು ವರ್ಷಾನುಗಟ್ಟಲೆ ತೆಗೆದುಕೊಂಡರೆ ಅಲ್ಲಿಯವರೆಗೆ ಆರಾಮರಾಗಿ ಇವರು ಬೇಕಾಬಿಟ್ಟಿಯಾಗಿ ಕೆಲಸ ಮಾಡಿಕೊಂಡು ಹೋಗುತ್ತಾರೆ. ಹೀಗಾಗಿ ಕೂಡಲೇ ಹೈಕೋರ್ಟಿನ ಆದೇಶದಂತೆ ಅವರನ್ನು ಡಿಸ್‌ಕ್ವಾಲಿಫೈ ಮಾಡಬೇಕೆಂದು ಜಂಟಿ ನಿಬಂಧಕರಿಗೆ ಆದೇಶಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಲಕ್ಷ್ಮಣ ಸ ಸವದಿ :- ಹೈಕೋರ್ಟಿನ ಆದೇಶವನ್ನು ತರಿಸಿಕೊಂಡು ನೋಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

(ಇ) ವಿಷಯ:- <u>ಹಾವೇರಿ ತಾಲ್ಲೂಕು ಹಂದಿಗನೂರು ಹಾಗೂ ತಿಮ್ಮಾಪುರ ಏತ ನೀರಾವರಿ ಯೋಜನೆಗಳಿಗೆ ಚಾಲನೆ ನೀಡುವ ಬಗ್ಗೆ.</u>

ಶ್ರೀ ನೆಹರು ಓಲೆಕಾರ (ಹಾವೇರಿ) :- ಮಾನ್ಯ ಉಪಾಧ್ಯಕ್ಷರೆ,ಹಾವೇರಿ ತಾಲ್ಲೂಕು ಹಂದಿಗನೂರು ಹಾಗೂ ತಿಮ್ಮಾಪುರ ಏತ ನೀರಾವರಿ ಯೋಜನೆಗಳಿಗೆ ಚಾಲನೆ ನೀಡುವ ಬಗ್ಗೆ ಮಾನ್ಯ ಚಲಸಂಪನ್ಮೂಲ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :- ಮಾನ್ಯ ಉಪಾಧ್ಯಕ್ಷರೆ,

<u>ಹಂದಿಗನೂರ ಏತ ನೀರಾವರಿ :</u>

ಹಾವೇರಿ ಜಿಲ್ಲೆಯ ಹಾವೇರಿ ತಾಲ್ಲೂಕಿನ ಹಂದಿಗನೂರ ಏತ ನೀರಾವರಿ ಯೋಜನೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ. ಈ ಯೋಜನೆಯ ನೀರಿನ ಮೂಲ ವರದಾ ನದಿಯಾಗಿರುತ್ತದೆ. ಈ ಯೋಜನೆಗೆ 1996-97 ರಿಂದ 2000-01 ರ ಸಾಲಿನ ವರೆಗೆ ಸಣ್ಣ ನೀರಾವರಿ ಇಲಾಖೆಯ ಆಯವ್ಯಯದಲ್ಲಿ

ಪ್ರತಿವರ್ಷ ಕೇವಲ ರೂ. 1000.00 ಸಾಂಕೇತಿಕ ಅನುದಾನವನ್ನು ಒದಗಿಸಲಾಗಿತ್ತು. 2000-01 ನೇ ಸಾಲಿನಲ್ಲಿ ಸದರಿ ಯೋಜನೆಯ ರೇಖಾ ಅಂದಾಜನ್ನು ರೂ. 3.00 ಕೋಟಿಗಳಿಗೆ ತಯಾರಿಸಲಾಗಿತ್ತು ಹಾಗೂ ಇದರಿಂದ 4037 ಎಕರೆ ನೀರಾವರಿ ಆಗಬಹುದೆಂದು ಅಂದಾಜಿಸಲಾಗಿತ್ತು. ಪ್ರಸಕ್ತ ಸಾಲಿನ ದರಪಟ್ಟಿಯಂತೆ ಕಾಮಗಾರಿಯ ಅಂದಾಜು ಸುಮಾರು ರೂ. 5.50 ಕೋಟಿ ಗಳಾಗಬಹುದೆಂದು ಅಂದಾಜಿಸಲಾಗಿದೆ. ಈ ಯೋಜನೆಯಿಂದ ಹಾವೇರಿ ತಾಲ್ಲೂಕಿನ ಬೈರಾಘರ, ಹಂದಿಗನೂರ ಮತ್ತು ಸವಣೂರು ತಾಲ್ಲೂಕಿನ ಇಚ್ಚಂಗಿ ಗ್ರಾಮಗಳ ಜಮೀನುಗಳಿಗೆ ನೀರಾವರಿ ಸೌಕರ್ಯ ಕಲ್ಪಿಸಬಹುದಾಗಿದೆ. ಅನುದಾನದ ಲಭ್ಯತೆಯನ್ನು ಆಧರಿಸಿ ಯೋಜನೆಯ ವಿವರವಾದ ಅಂದಾಜನ್ನು ಸಿದ್ಧಪಡಿಸಿ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ತಿಮ್ಮಾಪುರ ಏತ ನೀರಾವರಿ ಯೋಜನೆ :

ಹಾವೇರಿ ಜಿಲ್ಲೆ ಹಾವೇರಿ ತಾಲ್ಲೂಕಿನ 4176 ಎಕರೆ ಜಮೀನುಗಳಿಗೆ ತುಂಗ ಭದ್ರಾ ನದಿಯಿಂದ ನೀರನ್ನು ಬಳಸಿಕೊಂಡು ನೀರಾವರಿ ಒದಗಿಸಲು ತಿಮ್ಮಾಪುರ ಏತ ನೀರಾವರಿ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯಿಂದ ಹಾವೇರಿ ತಾಲ್ಲೂಕಿನ ಬಸಾಪುರ, ಬರಡಿ, ಕುರುಗುಂದ ಮತ್ತು ಕನವಳ್ಳಿ ಗ್ರಾಮಗಳ ಜಮೀನುಗ ಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ಯೋಜನೆಯ ಪ್ರಸ್ತಾವನೆಗೆ ದಿನಾಂಕ 28-12-2002 ರಂದು ನಡೆದ 72 ನೇ ತಾಂತ್ರಿಕ ಸಲಹಾ ಸಮಿತಿಯ ಸಭೆಯಲ್ಲಿ ಒಪ್ಪಿಗೆ ನೀಡಿದ್ದು, ನಂತರ ದಿನಾಂಕ 03-05-2005 ರಂದು ನಡೆದ ಎಂ.ಐ.ಪಿ.ಸಿ. ಬೋರ್ಡ್ ಸಭೆಯಲ್ಲಿ 0.62 ಟಿ.ಎಂ.ಸಿ. ನೀರಿನ ಹಂಚಿಕೆಯೊಂದಿಗೆ (ಸಣ್ಣ ನೀರಾವರಿಯಿಂದ ವರ್ಗಾಯಿಸಲಾದ) ಯೋಜನೆಯ ರೂ. 20.63 ಕೋಟಿಗಳ ಪ್ರಸ್ತಾವನೆಗೆ ಒಪ್ಪಿಗೆ ನೀಡಲಾಯಿತು.

ಯೋಜನೆಯ ಅಂದಾಜನ್ನು 2007-08 ನೇ ಸಾಲಿನ ದರ ಪಟ್ಟಿಯಂತೆ ರೂ. 27.15 ಕೋಟಿಗಳಿಗೆ ಪರಿಷ್ಕರಿಸಲಾಗಿದೆ.

2009-10 ನೇ ಸಾಲಿನ ಆಯವ್ಯಯದಲ್ಲಿ ಯೋಜನೆಗೆ ಸೂಕ್ತ ಅವಕಾಶ ಮಾಡಿಕೊಂಡು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಅಗತ್ಯ ಕ್ರಮ ಜರುಗಿಸಲಾಗಿದೆ.

ಶ್ರೀ ನೆಹರು ಓಲೇಕಾರ(ಹಾವೇರಿ) :- ಮಾನ್ಯ ಉಪಾಧ್ಯಕ್ಷರೆ, ಜಲಸಂಪನ್ಮೂಲ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಹಂದಿಗನೂರ ಏತ ನೀರಾವರಿ ಸಣ್ಣ ನೀರಾವರಿ ಇಲಾಖೆಯಿಂದ 1996-97ರಲ್ಲಿ ಪ್ರಾರಂಭವಾಗಿ ಟೋಕನ್ ಗ್ರಾಂಟ್ ಆಗಿ 1000 ರೂಪಾಯಿಗಳನ್ನು ನಿಗದಿ ಪಡಿಸುತ್ತಾ ಬಂದಿದ್ದಾರೆ. ಸಣ್ಣ ನೀರಾವರಿ ಇಲಾಖೆಯಿಂದ 5.5 ಕೋಟಿ ರೂಪಾಯಿ ಅಂದಾಜು ಮೊತ್ತದ ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ಇದನ್ನು ನೀರಾವರಿ ನಿಗಮಕ್ಕೆ ಬದಲಾವಣೆ ಮಾಡಿಕೊಂಡು ಅಲ್ಲಿ ಸರ್ವೆ ಮಾಡಿಸಿ ಕೂಡಲೇ ಆ ಕಾಮಗಾರಿಯನ್ನು ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅದರ ಜೊತೆಯಲ್ಲಿ ಸವಣೂರು ತಾಲ್ಲೂಕಿನ ಹಳ್ಳಿಗಳು ಸನ್ಮಾನ್ಯ ಬಸವರಾಜ್ ಬೊಮ್ಮಾಯಿರವರ ತಂದೆಯವರ ಕಾಲದಿಂದಲೂ ಸಹ ಆ ಹಳ್ಳಿಗಳು ಅವರ ತಂದೆಯವರ ಜೊತೆಯಲ್ಲಿಯೇ ಇದ್ದಂತವುಗಳಾಗಿವೆ. ಈಗಲೂ ಸಹ ಇವರು ಸವದತ್ತಿ ತಾಲ್ಲೂಕಿನ ಕೆಲವು ಹಳ್ಳಿಗಳನ್ನು ಪ್ರತಿನಿಧಿಸುವಂತವರಾಗಿದ್ದು ಇವತ್ತು ಸಚಿವರಾಗಿರುವುದರಿಂದ ಆ ಭಾಗದ ಜನತೆಗೆ ನೀರಾವರಿ ಸೌಲಭ್ಯವನ್ನು ಒದಗಿಸಿ ಕೊಡುವಂಥದ್ದು ಬಹಳ ಪ್ರಮುಖವಾದಂಥ ವಿಚಾರವಾಗಿದೆ. ಸನ್ಮಾನ್ಯ ಬಸವರಾಜ್ ಬೊಮ್ಮಾಯಿರವರಲ್ಲಿ ನಾನು ಕಳಕಳಿಯಿಂದ ವಿನಂತಿಮಾಡುವುದೇನೆಂದರೆ, ಇದನ್ನು ನೇರವಾಗಿ ಸಣ್ಣ ನೀರಾವರಿ ಇಲಾಖೆಯಿಂದ ವರ್ಗಾವಣೆ ಮಾಡಿಕೊಂಡು ತಮ್ಮ ಸುಬರ್ದಿಗೆ ತೆಗೆದುಕೊಂಡು ಕೂಡಲೇ ಸರ್ವೆಯನ್ನು ಮಾಡುವುದಕ್ಕೆ ಹಣಕಾಸಿನ ನೆರವನ್ನು ಬಿಡುಗಡೆ ಮಾಡುತ್ತೇವೆಂದು ಈ ಸದನದಲ್ಲಿ ಘೋಷಣೆ ಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಅದರ ಜೊತೆಯಲ್ಲಿ ತಿಮ್ಮಾಪುರ ಏತ ನೀರಾವರಿ ಯೋಜನೆಯನ್ನು ಜಾರಿಗೆ ತೆಗೆದುಕೊಳ್ಳುತ್ತೇನೆಂಬ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಆದ್ದರಿಂದ ಜನತೆಯ ಪರವಾಗಿ ಸನ್ಮಾನ್ಯ ಜಲಸಂಪನ್ಮೂಲ ಸಚಿವರಿಗೆ ತುಂಬು ಹೃದಯದ ಅಭಿನಂದನೆಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದನ್ನು 2008-09ನೇ ಸಾಲಿನ ಬಜೆಟ್‌ನಲ್ಲಿ ಸೇರಿಸಿಕೊಳ್ಳಬೇಕೆಂದು ನಾನು ಕಳಕಳಿಯಿಂದ ವಿನಂತಿಮಾಡಿಕೊಂಡು ಕೂಡಲೇ ಈ ಎರಡು ಯೋಜನೆಗಳಿಗೆ ಹಣಕಾಸಿನ ನೆರವನ್ನು ನೀಡಿ ಸರ್ವೆ ಮಾಡಿಸುವುದಕ್ಕೆ ಆದೇಶವನ್ನು ನೀಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ನೆಹರು ಓಲೇಕಾರ :- 1996-97ನೇ ಸಾಲಿನಿಂದ ಇಲ್ಲಿಯವರೆಗೂ ಸಹ ಪರಿಶೀಲನೆ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಸನ್ಮಾನ್ಯ ಬಸವರಾಜ ಬೊಮ್ಮಾಯಿರವರಿಗೆ ಅಲ್ಲಿನ ಸಂಪೂರ್ಣ ಚಿತ್ರಣದ ಮಾಹಿತಿ ಗೊತ್ತಿದೆ. ಆದ್ದರಿಂದ ಈಗಲೂ ಕೂಡ ಪರಿಶೀಲನೆ ಮಾಡುತ್ತೇನೆಂದು ಉತ್ತರ ಹೇಳತಕ್ಕಂಥದ್ದು ಸರಿಯಲ್ಲ. ಅದಕ್ಕೆ ಸರ್ವೆ ಮಾಡುವುದಕ್ಕೆ ಹಣ ಬಿಡುಗಡೆ ಮಾಡುತ್ತೇನೆಂದು ಘೋಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ :- ಸರ್ವೆ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇನೆ.

ಶ್ರೀ ನೆಹರು ಓಲೇಕಾರ :- ಸರ್ವೆ ಮಾಡುವುದಕ್ಕೆ ಹಣ ಬಿಡುಗಡೆ ಮಾಡುತ್ತೇನೆಂಬ ಮಾತನ್ನು ದಯವಿಟ್ಟು ಹೇಳಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ :- ಶಾಸಕರು ಹೇಳಿರುವ ಸಲಹೆಯನ್ನು ಪರಿಗಣಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ನೆಹರು ಓಲೇಕಾರ :- ಮಾನ್ಯ ಉಪಾಧ್ಯಕ್ಷರೆ, ಮತ್ತೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದರೆ ಆಗುವುದಿಲ್ಲ. ಸರ್ವೆ ಮಾಡುವುದಕ್ಕೆ ಹಣ ಬಿಡುಗಡೆ ಮಾಡುತ್ತೇನೆಂದು ದಯವಿಟ್ಟು ಹೇಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ :- ನೀರಾವರಿ ಇಲಾಖೆಯವರ ಜೊತೆ ಚರ್ಚೆ ಮಾಡಿ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ನೆಹರು ಓಲೇಕಾರ :- ಧನ್ಯವಾದಗಳು.